## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 849(998) |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | ಶ್ರೀ ಸುನೀಲ್ ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಯ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಕಂದಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ | 24-07-2024 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಬಲೇಶ್ವರ ತಾಲ್ಲೂಕಿನ ಕಣಬೂರ ಗ್ರಾಮದ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಮುಳುಗಡೆಯಾಗಿದ್ದು, ಸದರಿ ಗ್ರಾಮಸ್ಥರಿಗೆ ವಿಜಯಪುರ ತಾಲ್ಲೂಕಿನ ಮಹಾಲ ಬಾಗಾಯತ್ ಗ್ರಾಮದಲ್ಲಿ ಪುನರ್ ವಸತಿ ಕಲ್ಪಿಸಿ ಹಕ್ಕು ಪತ್ರಗಳನ್ನು ವಿತರಿಸಿದ್ದು. ಇಲ್ಲಿಯ ಖಾಲಿ ನಿವೇಶನಗಳನ್ನು ಕೆಲ ದಲ್ಲಾಳಿಗಳು ಖೊಟ್ಟಿದಾಖಲೆ ಸೃಷ್ಟಿಸಿ ಅಕ್ರಮವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಕ್ರಮ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ಬಬಲೇಶ್ವರ ತಾಲ್ಲೂಕಿನ ಕಣಬೂರ ಗ್ರಾಮದ ಪುನರ್‌ವಸತಿ ಕೇಂದ್ರವನ್ನು ವಿಜಯಪುರ ತಾಲ್ಲೂಕಿನ ಮಹಾಲಭಾಗಾಯತ ಗ್ರಾಮದಲ್ಲಿ ರಚಿಸಿದ್ದು, ಸದರಿ ಪುನರ್‌ವಸತಿ ಕೇಂದ್ರವನ್ನು ದಿನಾಂಕ: 13-01-2021 ರಂದು ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ ಇವರಿಗೆ ಹಸ್ತಾಂತರಿಸಲಾಗಿರುತ್ತದೆ. ಸದರಿ ಪುನರ್‌ವಸತಿ ಕೇಂದ್ರಕ್ಕೆ ಒಟ್ಟು ನಿವೇಶನ ರಚಿಸಿದ ಸಂಖ್ಯೆ 1141 ಮತ್ತು ಸಂತ್ರಸ್ಥರಿಗೆ ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ: 1139, ಹಂಚಿಕೆ ಮಾಡದೇ ಬಾಕಿ ಉಳಿದ 02 ನಿವೇಶನಗಳು ಇದ್ದು. ಸದರಿ ಪುನರ್‌ವಸತಿ ಕೇಂದ್ರದಲ್ಲಿ ಖಾಲಿ ನಿವೇಶನಗಳನ್ನು ಖೊಟ್ಟಿ ದಾಖಲೆ ಸೃಷ್ಟಿಸಿ ಮಾರಾಟ ಮಾಡುತ್ತಿರುವ ಕುರಿತು ಪುನರ್ವಸತಿ ಅಧಿಕಾರಿಗಳು, ಆಲಮಟ್ಟಿ ಇವರ ಕಾರ್ಯಾಲಯದಲ್ಲಿ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| (ಆ) | ಆಲಮಟ್ಟಿ ಪುನರ್ ವಸತಿ ಕಛೇರಿಯಲ್ಲಿ ಆಗಿರುವ ಅಕ್ರಮಗಳ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರವಾದ ಮಾಹಿತಿ ನೀಡುವುದು) | ಪುನರ್‌ವಸತಿ ಅಧಿಕಾರಿಗಳ ಕಛೇರಿ, ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿಯಲ್ಲಿ ಅಕ್ರಮಗಳ ಕುರಿತು ಮಾನ್ಯ ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ವಿಜಯಪುರ ಇವರು ಅನಿರೀಕ್ಷಿತವಾಗಿ ದಿನಾಂಕ: 13-08-2021 ರಂದು ದಾಳಿ ಮಾಡಿ ಪ್ರಕರಣ ಸಂಖ್ಯೆ:11/2021ನ್ನು ಸಂಬಂಧಿಸಿದಂತೆ ಅಧಿಕಾರಿ/ನೌಕರರ ಮೇಲೆ ಪ್ರಕರಣ ದಾಖಲಿಸಿದ್ದು, ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. |

**ಸಂಖ್ಯೆ: ಕಂಇ 06 ಎಲ್‌ಆರ್‌ಆರ್ 2024**

(ಕೃಷ್ಣ ಬೈರೇಗೌಡ)

ಮಾನ್ಯ ಕಂದಾಯ ಸಚಿವರು